ಕರ್ನಾಟಕ ಸರ್ಕಾರ

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರಕಛೇರಿ,
ಹಾಸನ ವೃತ್ತ, ಹಾಸನ - 573 201

ಕ: 08172-240613
ಮ:08172-267398

ccfhassan@gmail.com

ಸಂಖ್ಯೆ:ಎ8:ಲ್ಯಾಂಡ್:ಸಿಆರ್- 11/2020-21 ದಿನಾಂಕ: 20 ನೇ ಆಗಸ್ಟ್-2020

ಇವರಿಗೆ,

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು.
(ಅರಣ್ಯ ಸಂರಕ್ಷಣೆ) ಮತ್ತು
ನೋಡಲ್ ಅಧಿಕಾರಿ (ಅಸಕಾ)
ಅರಣ್ಯ ಭವನ, ಮಲ್ಲೇಶ್ವರಂ,
ಬೆಂಗಳೂರು.

ಮಾನ್ಯರೆ,

ವಿಷಯ:- Proposed BG line between Chikkamagaluru to Beluru.

ಉಲ್ಲೇಖ:- 1) ಆನ್ ಲೈನ್ ಅರ್ಜಿ ಸಂಖ್ಯೆ:FP/KA/Rail/40302/2019.
2) ಉಪ ಅರಣ್ಯ ಸಂರಕ್ಷಣಾಧಿಕಾರಿ, ಹಾಸನ ವಿಭಾಗ, ಹಾಸನ ಇವರ ಕಛೇರಿ ಪತ್ರ ಸಂಖ್ಯೆ:ಬಿ4/ಡಿಎಂಎನ್/ಎಫ್‌ಸಿ/ಸಿಆರ್-13/ 2020-21 ದಿನಾಂಕ:05-08-2020.

*********

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, Proposed BG line between Chikkamagaluru to Beluru ಕುರಿತು ಉಪ ಮುಖ್ಯ ಇಂಜಿನಿಯರ್, ಬೆಂಗಳೂರು ರವರು ಚಿಕ್ಕಮಗಳೂರು-ಬೇಲೂರು ಮಾರ್ಗದಲ್ಲಿ ರೈಲ್ವೆ ಯೋಜನೆ ಕಾಮಗಾರಿಯನ್ನು ಕೈಗೊಳ್ಳಲು ಅರಣ್ಯ ಸಂರಕ್ಷಣಾ ಕಾಯಿದೆ -1980 ರ ಪ್ರಕಾರ ಅರಣ್ಯ ಜಮೀನನ್ನು ಅರಣ್ಯೇತರ ಉದ್ದೇಶಕ್ಕೆ ಬಿಡುಗಡೆಗೆ ಕೋರಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿದಂತೆ ಹಾಸನ ಪ್ರಾದೇಶಿಕ ವಿಭಾಗದ ಬೇಲೂರು ವಲಯದ ವ್ಯಾಪ್ತಿಯಲ್ಲಿ ಸದರಿ ರೈಲ್ವೆ ಯೋಜನೆಗೆ ಸಂಬಂಧಿಸಿದಂತೆ ಯಾವುದೇ ಅರಣ್ಯ ಪ್ರದೇಶದ ನಡುವೆ ಹಾದು ಹೋಗುವುದಿಲ್ಲವೆಂದು ದೃಢೀಕರಣ ನೀಡಲು ಕೋರಿರುವ ಮೇರೆಗೆ ಉಪ ಅರಣ್ಯ ಸಂರಕ್ಷಣಾಧಿಕಾರಿ, ಪ್ರಾದೇಶಿಕ ವಿಭಾಗ, ಹಾಸನ ರವರು ಉಲ್ಲೇಖ (2) ರ ಪತ್ರದಲ್ಲಿ ಸದರಿ ಪ್ರಶ್ನಿತ ಪ್ರದೇಶವನ್ನು ವಲಯ ಅರಣ್ಯಾಧಿಕಾರಿ, ಬೇಲೂರು ಹಾಗೂ ಉಪ ವಲಯ ಅರಣ್ಯಾಧಿಕಾರಿ ಕಂ ಮೋಜಣಿದಾರರು ಬೇಲೂರು ಸೆಕ್ಷನ್ ಇವರುಗಳು ಸ್ಥಳ ಪರಿಶೀಲಿಸಿ ಪ್ರಶ್ನಿತ ಪ್ರದೇಶದಲ್ಲಿ ಯಾವುದೇ ಅರಣ್ಯ ಪ್ರದೇಶಗಳು ಬರುವುದಿಲ್ಲವೆಂದು ವರದಿ ಮಾಡಿರುತ್ತಾರೆಂದು ತಿಳಿಸುತ್ತಾ ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಉಲ್ಲೇಖ (2) ರ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಸನ ಇವರ ಪತ್ರವನ್ನು ಅಡಕಗಳೊಂದಿಗೆ ಈ ಪತ್ರಕ್ಕೆ ಲಗತ್ತಿಸಿ ತಮ್ಮ ಅವಗಾಹನೆಗೆ ಮುಂದಿನ ಅಗತ್ಯ ಕ್ರಮಕ್ಕಾಗಿ ಸಲ್ಲಿಸಲಾಗಿದೆ.

ತಮ್ಮ ನಂಬುಗೆಯ,

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ,
ಹಾಸನ ವೃತ್ತ, ಹಾಸನ.

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,
ಹಾಸನ ವಿಭಾಗ, ಹಾಸನ.

ಅರಣ್ಯ ಇಲಾಖೆ

ಅರಣ್ಯ ಭವನ, ಡೈರಿ ಸರ್ಕಲ್,
ಬಿ. ಎಂ. ರಸ್ತೆ, ಹಾಸನ-573 201.
ದೂರವಾಣಿ & ಫ್ಯಾಕ್ಸ್ : 08172-268296
ಈಮೈಲ್ : dcfhassan@yahoo.in,

ಸಂಖ್ಯೆ: ಬಿ4/ಡಿಎಂಎನ್/ಎಫ್‌ಸಿ/ಸಿಆರ್-13/2020-21 ದಿನಾಂಕ: 05.08.2020

ಇವರಿಗೆ :
ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು,
ಹಾಸನ ವೃತ್ತ,
ಹಾಸನ.

ಮಾನ್ಯರೆ,

ವಿಷಯ : Proposed BG Line between Chikkamagaluru to Beluru .

ಉಲ್ಲೇಖ :
1. ಆನ್ ಲೈನ್ ಅರ್ಜಿ ಸಂಖ್ಯೆ: FP/KA/Rail/40302/2019.
2. Letter No. W.271/ DRU-CMG/LA-Belur Forest. Dated: 31.07.2020. of the Deputy Chief Engineer, Construction, West-1 Bangalore.
3. ವಲಯ ಅರಣ್ಯಾಧಿಕಾರಿ, ಬೇಲೂರು ವಲಯ, ಬೇಲೂರು ರವರ ಕಛೇರಿ ಪತ್ರ ಸಂಖ್ಯೆ: ವಲಅ/ ಬೇ/ ರೈಲ್ವೆ ಲೈನ್/ ಅರಣ್ಯ ಭೂಮಿ/ ಜಿಎಲ್:700/ 2020-21 ದಿನಾಂಕ: 05.08.2020.

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ
ಹಾಸನ ವೃತ್ತ, ಹಾಸನ
05 AUG 2020

@@@

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ(1)ರ ಪತ್ರದಲ್ಲಿ ಉಪ ಮುಖ್ಯ ಇಂಜಿನಿಯರ್, ಬೆಂಗಳೂರು ರವರು ಚಿಕ್ಕಮಗಳೂರು-ಬೇಲೂರು ಮಾರ್ಗದಲ್ಲಿ ರೈಲ್ವೆ ಯೋಜನೆ ಕಾಮಗಾರಿಯನ್ನು ಕೈಗೊಳ್ಳಲು ಅರಣ್ಯ ಸಂರಕ್ಷಣಾ ಕಾಯಿದೆ-1980ರ ಪ್ರಕಾರ ಅರಣ್ಯ ಭೂಮಿ ಪರಿವರ್ತನೆ ಕೋರಿ ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಿರುತ್ತಾರೆ ಮುಂದುವರಿದು ಉಲ್ಲೇಖ(2)ರ ಪತ್ರದಲ್ಲಿ ಬೇಲೂರು ವ್ಯಾಪ್ತಿಯಲ್ಲಿ ಸದರಿ ರೈಲ್ವೆ ಕಾಮಗಾರಿಗೆ ಸಂಬಂದಿಸಿದಂತೆ ಯಾವುದೇ ಅರಣ್ಯ ಪ್ರದೇಶದ ನಡುವೆ ಹಾದು ಹೋಗುವುದಿಲ್ಲವೆಂದು ದೃಡೀಕರಣ ನೀಡಲು ಕೋರಿರುತ್ತಾರೆ.

ಉಲ್ಲೇಖ(3)ರ ಪತ್ರದಲ್ಲಿ ವಲಯ ಅರಣ್ಯಾಧಿಕಾರಿ, ಬೇಲೂರು ರವರು ಸದರಿ ರೈಲ್ವೆ ಯೋಜನೆಗೆ ಸಂಬಂದಿಸದ ಪ್ರದೇಶಗಳನ್ನು ಪರಿಶೀಲಿಸಿ, ರೈಲ್ವೆ ಲೈನ್ ಹಾದು ಹೋಗುವ ಜಾಗಗಳಲ್ಲಿ ಯಾವುದೇ ಅರಣ್ಯ ಭೂಮಿ ಬರುವುದಿಲ್ಲವೆಂದು ವರದಿ ಮಾಡಿರುತ್ತಾರೆ.

ಅದರಂತೆ ಉಪಯೋಗಿ ಸಂಸ್ಥೆಯವರು ಆನ್ ಲೈನ್‌ನಲ್ಲಿ ನಮೂದಿಸಿರುವ ಗ್ರಾಮಗಳು ಬೇಲೂರು ವಲಯ ಅರಣ್ಯ ಪ್ರದೇಶದ ವ್ಯಾಪ್ತಿಗೆ ಬರುವುದಿಲ್ಲವೆಂಬ ಎಂಬ ಅಂಶವನ್ನು ತಮ್ಮ ಅವಗಾಹನೆಗೆ ಸಲ್ಲಿಸುತ್ತಾ, ಆನ್‌ಲೈನ್‌ನಲ್ಲಿ ಸಲ್ಲಿಸಿರುವ ಪ್ರಸ್ತಾವನೆಯನ್ನು ಈ ಕಛೇರಿಯ ಷರಾ ನಮೂದಿಸಿ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.

ತಮ್ಮ ನಂಬುಗೆಯ,

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಹಾಸನ ವಿಭಾಗ, ಹಾಸನ.

# SITE INSPECTION REPORT

The proposed project area has been inspected by Range Forest Officer, Belur, and Deputy Range Forest Officer, Belur Section and as per their Report no forest land comes in between Chikamagaluru- Belur proposed railway line.

Date : 05.08.2020

M. S.
Deputy Conservator of Forests,
Hassan Division, Hassan.